ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY
ಯರಗೇರಾ-584133, ರಾಯಚೂರು, ಕರ್ನಾಟಕ ರಾಜ್ಯ, ಭಾರತ
ಆಡಳಿತ ವಿಭಾಗ E-mail: registrarrur@gmail.com

ಸಂಖ್ಯೆ: ರಾವಿರಾ/ಆಡಳಿತ/ಸಿಂಡಿಕೇಟ್ ಸಭೆ/ಸಾಮಾನ್ಯ/2024-25/ ದಿನಾಂಕ:

## ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

ದಿನಾಂಕ: 27.01.2025 ರಂದು ಸೋಮವಾರ ಬೆಳಗ್ಗೆ 11 ಗಂಟೆಗೆ ವಿಶ್ವವಿದ್ಯಾಲಯದ ಆಡಳಿತ ಕಚೇರಿಯಲ್ಲಿ ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು.

### ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು

| | | |
|---|---|---|
| 1. ಡಾ. ಸುಯಮೀಂದ್ರ ಎಸ್. ಕುಲಕರ್ಣಿ | ಕುಲಪತಿಗಳು (ಪ್ರಭಾರ) | ಅಧ್ಯಕ್ಷರು |
| 2. ಡಾ. ಕೆ. ವೆಂಕಟೇಶ್ | ಡೀನರು | ಸದಸ್ಯರು |
| 3. ಶ್ರೀ ಶಿವಬಸಪ್ಪ ಮಾಲಿಪಾಟೀಲ್ | | ಸದಸ್ಯರು |
| 4. ಶ್ರೀ ನಾಗೇಂದ್ರ ಪ್ರಸಾದ ಎ. ಎಂ. | | ಸದಸ್ಯರು |
| 5. ಡಾ. ಮೀನಾಕ್ಷಿ ಖಂಡಿಮಠ | | ಸದಸ್ಯರು |
| 6. ಶ್ರೀ ಡಿ.ಆರ್.ಚಿನ್ನ | | ಸದಸ್ಯರು |
| 7. ಶ್ರೀ ಜೀಶಾನ್ ಅಖಿಲ್ ಸಿದ್ದಿಖಿ | | ಸದಸ್ಯರು |
| 8. ಶ್ರೀ ಶಿವಣ್ಣ ತಂದೆ ಬುಡ್ಡಪ್ಪ ತಪ್ಪಲದೊಡ್ಡಿ | | ಸದಸ್ಯರು |
| 9. ಶ್ರೀ ಚನ್ನಬಸವ ತಂದೆ ಬಸವರಾಜಪ್ಪ | | ಸದಸ್ಯರು |
| 10. ಡಾ. ಪದ್ಮಾಕರ್ ಅಶೋಕ ಕುಮಾರ | | ಸದಸ್ಯರು |
| 11. ಶ್ರೀ ಪಾಂಡು | | ಸದಸ್ಯರು |
| 12. ಡಾ. ನಾಗರತ್ನ ಎಂ. ನಾಯ್ಕ್ | | ಸದಸ್ಯರು |
| 13. ಡಾ. ಇಕ್ಬಾಲ್ ಶೇಖ್ | | ಸದಸ್ಯರು |
| 14. ಪ್ರೊ. ಪಾರ್ವತಿ ಸಿ.ಎಸ್ | | ಸದಸ್ಯರು |
| 15. ಪ್ರೊ. ಯರಿಸ್ವಾಮಿ ಎಂ., ಕುಲಸಚಿವರು (ಮೌಲ್ಯಮಾಪನ) | | ಸದಸ್ಯರು |
| 16. ಡಾ. ಶಂಕರ ವ್ಹಿ., ಕೆ.ಎ.ಎಸ್. (ಆಯ್ಕೆ ಶ್ರೇಣಿ) ಕುಲಸಚಿವರು | | ಸದಸ್ಯ ಕಾರ್ಯದರ್ಶಿಗಳು |

ಮೊದನೆಯದಾಗಿ ಕುಲಸಚಿವರು ಸಭಾ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಹಾಗೂ ಸಭೆಗೆ ಆಗಮಿಸಿದ ಸಿಂಡಿಕೇಟ್ ಸದಸ್ಯರುಗಳನ್ನು ಸ್ವಾಗತಿಸಿ, ಸಭೆ ನಡೆಸಿಕೊಂಡು ಹೋಗಲು ಮಾನ್ಯ ಕುಲಪತಿಗಳನ್ನು ವಿನಂತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು.

| ಐಟಂ ಸಂಖ್ಯೆ | ವಿಷಯ | ಕೈಗೊಂಡ ನಿರ್ಣಯಗಳು |
|---|---|---|
| 01 | ದಿನಾಂಕ: 25.10.2024 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವ ಕುರಿತು. | ದಿನಾಂಕ 25.10.2024 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ಚರ್ಚಿಸಿದ ನಂತರ ಒಮ್ಮತದಿಂದ ಸಭೆಯು ನಡವಳಿಗಳನ್ನು ದೃಢೀಕರಿಸಲಾಗಿ ಅಂಗೀಕರಿಸಲಾಯಿತು. |
| 02 | ವಿಶ್ವವಿದ್ಯಾಲಯದ ಆಡಳಿತಾತ್ಮಕ ಹಿತದೃಷ್ಟಿಯಿಂದ ವಿವಿಧ ಉಪ-ಸಮಿತಿಗಳನ್ನು ರಚಿಸುವ ಕುರಿತು ಚರ್ಚೆ. | ಸದರಿ ಉಪ-ಸಮಿತಿಗಳ ರಚನೆಯ ಕುರಿತು ಮಾತೃ ವಿಶ್ವವಿದ್ಯಾಲಯವಾದ ಗುಲಬರ್ಗಾ ವಿಶ್ವವಿದ್ಯಾಲಯ ರಚಿಸಿಕೊಂಡ ಪರಿನಿಯಮಾವಳಿಗಳ ಮತ್ತು ಬೇರೆ ವಿಶ್ವವಿದ್ಯಾಲಯಗಳ ಪರಿನಿಯಮಾವಳಿಗಳನ್ನು ಸಹಾ ಪರಿಗಣಿಸಿ ರಾಯಚೂರು ವಿಶ್ವವಿದ್ಯಾಲಯದ ಪರಿನಿಯಮಾವಳಿಗಳನ್ನು ರಚಿಸಿ ಈ ವಿಷಯವನ್ನು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಲು ಸರ್ವಾನುಮತದಿಂದ ನಿರ್ಧರಿಸಲಾಯತು. |



Scanned with OKEN Scanner

| | | |
|---|---|---|
| 03 | ಪ್ರಸ್ತುತ ಚಾಲ್ತಿಯಲ್ಲಿರುವ ರಾಯಚೂರು ವಿಶ್ವವಿದ್ಯಾಲಯದ 24 ಸಹಾಯಕ-ಪ್ರಾಧ್ಯಾಪಕರ ನೇಮಕಾತಿಗೆ ಸಂಬಂಧಿಸಿದಂತೆ BOA ರಚಿಸಲು ಸಂಬಂಧಿಸಿದ ವಿಷಯ/ವಿಭಾಗದಲ್ಲಿ ವಿಷಯ ತಜ್ಞರ ಪಟ್ಟಿಯನ್ನು ರಚಿಸುವ ಸಂಬಂಧ ಚರ್ಚೆ. | ಸರ್ಕಾರದಿಂದ ಅನುಮೋದನೆಗೊಂಡ ರಾಯಚೂರು ವಿಶ್ವವಿದ್ಯಾಲಯದ ನೇಮಕಾತಿ ಪರಿನಿಯಮಾವಳಿಗಳ (THE STATUTES RELATING TO APPOINTMENT AND PROMOTION OF TEACHERS AND OTHER ACADEMIC STAFF AND MEASURES FOR THE MAINTENANCE OF STANDARDS IN HIGHER EDUCATION IN THE RAICHUR UNIVERISTY, AS PER THE UGC REGULATIONS 2018) ರ ಪ್ರಕರಣ 5.1(I) (iii) ಅನುಸಾರ ಸಿದ್ಧಪಡಿಸಲಾದ ವಿವಿಧ ವಿಶ್ವವಿದ್ಯಾಲಯಗಳ 10 ಜನ ವಿಷಯ ತಜ್ಞ ಪ್ರಾಧ್ಯಾಪಕರು/ಸಹ-ಪ್ರಾಧ್ಯಾಪಕರ ಪಟ್ಟಿಯನ್ನು ಅನುಮೋದಿಸಲಾಯಿತು. ಮುಂದುವರೆದು ಪ್ರತಿ ವಿಷಯವಾರು 03 ಜನ ವಿಷಯ ತಜ್ಞರನ್ನು BOA ಗೆ ನಾಮನಿರ್ದೇಶನ ಮಾಡುವ ಅಧಿಕಾರವನ್ನು ಮಾನ್ಯ ಕುಲಪತಿಗಳ ವಿವೇಚನೆಗೆ ನೀಡಲು ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು. |
| 04 | ರಾಯಚೂರು ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವವನ್ನು ಏರ್ಪಡಿಸುವ ಕುರಿತು ಚರ್ಚೆ | ಫೆಬ್ರವರಿ 2025ರ ಕೊನೆಯ ವಾರ ಅಥವಾ ಮಾರ್ಚ 2025ರ ಮೊದಲ ವಾರದಲ್ಲಿ ಏರ್ಪಡಿಸಲು ತೀರ್ಮಾನಿಸಲಾಯಿತು ಮುಂದುವರೆದು ಸದರಿ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರಧಾನ ಮಾಡುವ ಸಲುವಾಗಿ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಅನುಮೊದನೆಗೊಂಡ ಕರಡು ಪರಿನಿಯಮಾವಳಿಗಳನ್ನು ಸರ್ಕಾರ ಮತ್ತು ಕುಲಾಧಿಪತಿಗಳ ಅನುಮೋಧನೆ ಆಗುವವರೆಗೆ ಮಾತೃ ವಿಶ್ವವಿದ್ಯಾಲಯವಾದ ಗುಲಬರ್ಗಾ ವಿಶ್ವವಿದ್ಯಾಲಯದ ಪರಿನಿಯಮಾವಳಿಗಳನ್ನೇ ಅಳವಡಿಕೊಳ್ಳಲು ನಿರ್ಧರಿಸಲಾಯಿತು. |
| 05 | ರಾಯಚೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿಗಳ 2ನೇ ಮತ್ತು 4ನೇ ಸೆಮಿಸ್ಟರ್ ಪರೀಕ್ಷೆಯ ಮೌಲ್ಯಮಾಪನವನ್ನು Single Valuation ಮಾಡಲು ನಿರ್ಧರಿಸುವ ಕುರಿತು ಚರ್ಚೆ. | ಸ್ನಾತಕೋತ್ತರ ಪದವಿಗಳ 1 ಮತ್ತು 3ನೇ ಸೆಮಿಸ್ಟರ್ ಪರೀಕ್ಷಾ ಮೌಲ್ಯಮಾಪನವನ್ನು ಈಗಾಗಲೇ Single Valuation ಜಾರಿಯಲ್ಲಿರುವುದರಿಂದ ಮತ್ತು ಶೈಕ್ಷಣಿಕ ಗುಣಮಟ್ಟ ಕಾಪಾಡುವ ಹಿತದೃಷ್ಟಿಯಿಂದ ಪ್ರಸ್ತುತ ಸ್ನಾತಕೋತ್ತರ ಪದವಿಗಳ 2ನೇ ಮತ್ತು 4ನೇ ಸೆಮಿಸ್ಟರ್ ಪರೀಕ್ಷೆಯ ಮೌಲ್ಯಮಾಪನವನ್ನು ಚಾಲ್ತಿಯಲ್ಲಿರುವ Double Valuation ಮುಂದುವರೆಸಿಕೊಂಡು ಹೋಗಲು ತೀರ್ಮಾನಿಸಲಾಯಿತು. |
| 06 | ರಾಯಚೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ಅಧ್ಯಾಪಕರ ಸಂಘ (ನೊಂದಾಯಿತ) ಇವರ ಪತ್ರ ದಿನಾಂಕ: 13.01.2025 ರ ಪ್ರಕಾರ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಅತಿಥಿ ಉಪನ್ಯಾಸಕರ ನೇಮಕಾತಿಯಲ್ಲಿ ಎಂ.ಎ. ಅರ್ಥಶಾಸ್ತ್ರ ಅಧ್ಯಯನ ಮಾಡಿರುವ ಅಭ್ಯರ್ಥಿಗಳನ್ನು ಮಾತ್ರ ಪರಿಗಣಿಸಬೇಕೆಂದು ಮನವಿ ಪತ್ರವನ್ನು ಸಲ್ಲಿಸಿರುತ್ತಾರೆ. ಸದರಿ ವಿಷಯದ ಕುರಿತು ಚರ್ಚೆ. | ಪ್ರಸ್ತುತ ಚಾಲ್ತಿಯಲ್ಲಿರುವ ಶೈಕ್ಷಣಿಕ ಸೆಮಿಸ್ಟರ್ ಮುಕ್ತಾಯಗೊಂಡ ನಂತರ ಅರ್ಥಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಅತಿಥಿ ಉಪನ್ಯಾಸಕ ನೇಮಕಾತಿ ಪ್ರಕ್ರಿಯೆಯನ್ನು ವಿಶ್ವವಿದ್ಯಾಲಯ ಮತ್ತು ಯುಜಿಸಿಯ ನಿಯಮಾನುಸಾರ ಕೈಗೊಳ್ಳಲು ತೀರ್ಮಾನಿಸಲಾಯಿತು. |



Scanned with OKEN Scanner

| | | |
|---|---|---|
| 07 | ರಾಯಚೂರು ವಿಶ್ವವಿದ್ಯಾಲಯದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ವಸತಿ ವ್ಯವಸ್ಥೆಯ ಅನುಕೂಲಕ್ಕಾಗಿ ಭೀಮಾ ವಸತಿನಿಲಯದಲ್ಲಿ ವಸತಿ ವ್ಯವಸ್ಥೆಯನ್ನು ನಿರ್ವಹಿಸುವ ಕುರಿತು ಮತ್ತು ಹೆಚ್ಚುವರಿ ಅಂದಾಜು 50 ವಿದ್ಯಾರ್ಥಿಗಳ ನಿರ್ವಹಣೆಗಾಗಿ ಸಿಬ್ಬಂದಿಗಳ ಹಿಂದಿನ ವೇತನ ಪಾವತಿಸುವ ಹಾಗೂ ಸದರಿ ಸಿಬ್ಬಂದಿಗಳನ್ನು ಮುಂದುವರೆಸುವ ಕುರಿತು ಚರ್ಚೆ. | ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಒಮ್ಮತದಿಂದ ಒಪ್ಪಿಗೆ ನೀಡಲಾಯಿತು. |

| ಕ್ರ. ಸಂ. | ಸಿಬ್ಬಂದಿ ಹೆಸರು ಮತ್ತು ಹುದ್ದೆ | ಕಾರ್ಯನಿರ್ವಹಿಸುತ್ತಿರುವ ಸ್ಥಳ | ತಿಂಗಳುಗಳು | ವೇತನ |
|---|---|---|---|---|
| 1 | ಶ್ರೀಮತಿ ಆಶೀರ್ವಾದಮ್ಮ ಅಡುಗೆಯವರು | ಡಾ. ಬಿ.ಆರ್. ಅಂಬೇಡ್ಕರ್ ಸರ್ಕಾರಿ ಮೆ. ನಂ. ಬಾಲಕರ ವಸತಿ ನಿಲಯ | ಮೇ-2024 | 19,158/- |
| | | | ಜೂನ್-2024 | 18,540/- |
| | | | ಜುಲೈ-2024 | 19,158/- |
| | | | ಆಗಸ್ಟ್-2024 | 19,158/- |
| | | | ಸೆಪ್ಟೆಂಬರ್-2024 | 18,540/- |
| | | | **ಒಟ್ಟು ವೇತನ** | **94,554/-** |
| 2 | ಶ್ರೀ ಮಹೆಬೂಬ್ ಪಾಷಾ, ಅಡುಗೆ ಸಹಾಯಕರು | ಡಾ. ಬಿ.ಆರ್. ಅಂಬೇಡ್ಕರ್ ಸರ್ಕಾರಿ ಮೆ. ನಂ. ಬಾಲಕರ ವಸತಿ ನಿಲಯ | ಮೇ-2024 | 19,158/- |
| | | | ಜೂನ್-2024 | 18,540/- |
| | | | ಜುಲೈ-2024 | 19,158/- |
| | | | ಆಗಸ್ಟ್-2024 | 19,158/- |
| | | | ಸೆಪ್ಟೆಂಬರ್-2024 | 18,540/- |
| | | | **ಒಟ್ಟು ವೇತನ** | **94,554/-** |
| 3 | ಶ್ರೀಮತಿ ಸರೋಜ, ಅಡುಗೆ ಸಹಾಯಕರು | ಡಾ. ಬಿ.ಆರ್. ಅಂಬೇಡ್ಕರ್ ಸರ್ಕಾರಿಮೆ. ನಂ. ಬಾಲಕಿಯರ ವಸತಿ ನಿಲಯ | ಮೇ-2024 | 19,158/- |
| | | | ಜೂನ್-2024 | 18,540/- |
| | | | ಜುಲೈ-2024 | 19,158/- |
| | | | ಆಗಸ್ಟ್-2024 | 19,158/- |
| | | | ಸೆಪ್ಟೆಂಬರ್-2024 | 18,540/- |
| | | | **ಒಟ್ಟು ವೇತನ** | **94,554/-** |
| | | | | **2,83,662/-** |

| | | |
|---|---|---|
| 08 | ರಾಯಚೂರು ವಿಶ್ವವಿದ್ಯಾಲಯದ ಕ್ರೀಡಾ ಮತ್ತು ದೈಹಿಕ ಶಿಕ್ಷಣ ವಿಭಾಗಕ್ಕೆ ನಿಯೋಜನೆ ಮಾಡಿಕೊಂಡಿರುವ ಸಂಯೋಜಕರ ಕರ್ತವ್ಯದ ಅವಧಿಯು ದಿನಾಂಕ: 30.11.2024ಕ್ಕೆ ಪೂರ್ಣಗೊಂಡಿರುವುದರಿಂದ ಸದರಿಯವರ ಸೇವೆಯನ್ನು ಮುಂದುವರೆಸುವ ಕುರಿತು ಚರ್ಚೆ. | ಸದರಿಯವರ ಸೇವೆಯನ್ನು ದಿನಾಂಕ: 02.12.2024 ರಿಂದ ಪೂರ್ವಾನ್ವಯವಾಗುವಂತೆ 11 ತಿಂಗಳುಗಳವರೆಗೆ ಅಥವಾ ಮುಂದಿನ ಆದೇಶದವರೆಗೆ ಮುಂದುವರೆಸಲು ತೀರ್ಮಾನಿಸಲಾಯಿತು ಹಾಗೂ ಪ್ರಸ್ತುತ ನೀಡುತ್ತಿರುವ ತಿಂಗಳಿನ ಗೌರವಧನವನ್ನು ಪರೀಷ್ಕರಿಸಿ ಪ್ರತಿ ತಿಂಗಳಿಗೆ ರೂ. 32,000=00 ಗಳಂತೆ ನೀಡಲು ತೀರ್ಮಾನಿಸಲಾಯಿತು. |
| 09 | ರಾಯಚೂರು ವಿಶ್ವವಿದ್ಯಾಲುದ ವಿದ್ಯಾರ್ಥಿಗಳಿಗೆ ಯೋಗ ತರಬೇತಿಯ ಕಾರ್ಯ ಚಟುವಟಿಕೆಗಳಿಗೆ ಯೋಗ ಸಂಯೋಜಕರನ್ನು ನಿಯೋಜನೆ ಮಾಡಿಕೊಂಡಿರುತ್ತದೆ. ಸದರಿಯವರ ಕರ್ತವ್ಯದ ಅವದಿಯು 31.01.2025 ಕ್ಕೆ ಮುಕ್ತಾಯವಾಗುವುದರಿಂದ ಸದರಿಯವರ ಸೇವೆಯನ್ನು ಮುಂದುವರೆಸುವ ಹಾಗೂ ಸದರಿಯವರಿಗೆ ವೇತನ ಪರಿಷ್ಕರಿಸುವ ಕುರಿತು ಚರ್ಚೆ. | ದಿನಾಂಕ: 01.02.2025 ರಿಂದ ಅನ್ವಯವಾಗುವಂತೆ ಬಿಡುಗಡೆಗೊಳಿಸಲು ಒಪ್ಪಿತು. |



Scanned with OKEN Scanner

| | | |
|---|---|---|
| 10 | ರಾಯಚೂರು ವಿಶ್ವವಿದ್ಯಾಲಯದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕರ್ತವ್ಯದ ಅವಧಿಯು ದಿನಾಂಕ: 31.12.2024ಕ್ಕೆ ಪೂರ್ಣಗೊಂಡಿರುವುದರಿಂದ ಸದರಿಯವರ ಸೇವೆಯನ್ನು ಮುಂದುವರೆಸುವ ಕುರಿತು ಚರ್ಚೆ. | ಪ್ರಸ್ತುತ ಆಡಿಟ್ ಪ್ರಕ್ರಿಯೆಯು ಚಾಲ್ತಿಯಲ್ಲಿರುವುದರಿಂದ ಮತ್ತು ಕೆಲವು ಸಿವಿಲ್ ಕಾಮಗಾರಿಗಳು ಪ್ರಗತಿಯಲ್ಲಿರುವುದುರಿಂದ ಸದರಿಯವರನ್ನು ಮಾರ್ಚ್–2025 ರವರೆಗೆ ಅಥವಾ ಆಡಿಟ್ ಪ್ರಕ್ರಿಯೆ ಮುಗಿಯುವವರೆಗೆ ಸದರಿಯವರ ದಿನದ ಸೇವಾ ವೇಳೆಯನ್ನು ಅರ್ಧಕ್ಕೆ ಕಡಿತಗೊಳಿಸಿ, ಇವರ ವೇತನವನ್ನು ಸಹಾ ಅರ್ಧಕ್ಕೆ ಕಡಿತಗೊಳಿಸಿ ಮುಂದುವರೆಸಲು ನಿರ್ಧರಿಸಲಾಯಿತು. ಮುಂದುವರೆದು ಒಬ್ಬ ನುರಿತ ಸಿವಿಲ್ ಅಭಿಯಂತರರನ್ನು ಸದರಿಯವರಿಂದ ಕಡಿತಗೊಳಿಸಿದ ವೇತನಕ್ಕೆ ಸರಿ ಹೊಂದುವಂತೆ ನೇಮಕಾತಿ ಮಾಡಿಕೊಳ್ಳಲು ನಿರ್ಧರಿಸಲಾಯಿತು. |
| 11 | ರಾಯಚೂರು ವಿಶ್ವವಿದ್ಯಾಲಯದ ಯುಯುಸಿಎಂಎಸ್ ತಾಂತ್ರಿಕ ಅಧಿಕಾರಿಗಳ ಕರ್ತವ್ಯದ ಅವಧಿಯು ದಿನಾಂಕ: 31.01.2025 ಕ್ಕೆ ಮುಕ್ತಾಯವಾಗುವುದರಿಂದ ಸದರಿಯವರ ಸೇವೆಯನ್ನು ಮುಂದುವರೆಸುವ ಕುರಿತು ಚರ್ಚೆ. | ಸದರಿಯವರ ಸೇವೆಯನ್ನು ದಿನಾಂಕ: 02.02.2025 ರಿಂದ ಅನ್ವಯವಾಗುವಂತೆ 11 ತಿಂಗಳುಗಳವರೆಗೆ ಅಥವಾ ಮುಂದಿನ ಆದೇಶದವರೆಗೆ ಮುಂದುವರೆಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 12 | ಡಾ. ಬಸವ ಪ್ರಸಾದ ಸಹಾಯಕ ಪ್ರಾಧ್ಯಾಪಕರು, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಾದಗಿರಿ ಇವರನ್ನು ದಿನಾಂಕ: 29.03.2023 ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯದಂತೆ, ಸದರಿಯವರ ಅನುಚಿತ ಹಾಗೂ ಅಶಿಸ್ತಿನ ವರ್ತನೆಯನ್ನು ಖಂಡಿಸಿ ಮೂರು ಶೈಕ್ಷಣಿಕ ವರ್ಷಗಳವರೆಗೆ ಕಪ್ಪುಪಟ್ಟಿಯಲ್ಲಿ ಸೇರಿಸಲಾಗಿತ್ತು. ಇದನ್ನು ತೆರವುಗೊಳಿಸಿ ವಿಶ್ವವಿದ್ಯಾಲಯ ಶೈಕ್ಷಣಿಕ ಹಾಗೂ ಪರೀಕ್ಷಾ ಕಾರ್ಯದಲ್ಲಿ ತಮ್ಮನ್ನು ಪರಿಗಣಿಸಬೇಕೆಂದು ಮನವಿ ಪತ್ರವನ್ನು ಸಲ್ಲಿಸಿರುತ್ತಾರೆ. ಈ ವಿಷಯದ ಕುರಿತು ಚರ್ಚೆ. | ಸದರಿಯವರನ್ನು ಕಪ್ಪು ಪಟ್ಟಿಯಲ್ಲಿ ಸೇರಿಸಿರುವುದನ್ನು ತೆರವುಗೊಳಿಸಿ ವಿಶ್ವವಿದ್ಯಾಲಯದ ಶೈಕ್ಷಣಿಕ ಹಾಗೂ ಪರೀಕ್ಷಾ ಕಾರ್ಯಗಳಲ್ಲಿ ಪರಿಗಣಿಸಲು ತೀರ್ಮಾನಿಸಲಾಯಿತು. |
| 13 | ಶಾಹೀನ್ ಶಿಕ್ಷಣ ಸಂಸ್ಥೆಯವರು ತಮ್ಮ ಪತ್ರ ದಿನಾಂಕ: 14.01.2025ರ ಮುಖಾಂತರ ವಿದೇಶಗಳಾದ ಖತಾರ್ ಮತ್ತು ಯುಎಇಗಳಲ್ಲಿ ವಾಸವಾಗಿರುವ ಭಾರತೀಯರ ಉನ್ನತ ವ್ಯಾಸಂಗಕ್ಕಾಗಿ ರಾಯಚೂರು ವಿಶ್ವವಿದ್ಯಾಲಯ ಸಹಯೋಗದೊಂದಿಗೆ ಆನ್‌ಲೈನ್ ಮುಖಾಂತರ ಪದವಿ ವ್ಯಾಸಂಗ ಕೋರ್ಸುಗಳನ್ನು ಪ್ರಾರಂಭಿಸುವ ಸಂಬಂಧ ಮನವಿ ಪತ್ರವನ್ನು ಸಲ್ಲಿಸಿರುತ್ತಾರೆ. ಸದರಿ ವಿಷಯದ ಕುರಿತು ಚರ್ಚೆ. | ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಈ ವಿಷಯವನ್ನು ಚರ್ಚಿಸಲು ತಿರ್ಮಾನಿಸಲಾಯಿತು. |
| 14 | 2024–25 ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅನುದಾನದ ಅಡಿಯಲ್ಲಿ ರಾಯಚೂರು ವಿಶ್ವವಿದ್ಯಾಲಯಕ್ಕೆ ಮಂಜೂರಾಗಿರುವ ರೂ. 36.30 ಕೋಟಿಗಳ ಕಾಮಗಾರಿಗಳಿಗೆ ವಿವರವಾದ ಯೋಜನಾ ವರದಿ (DPR) ಯನ್ನು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ಸಲ್ಲಿಸುವ ಕುರಿತು ಚರ್ಚೆ. | 2024–25 ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅನುದಾನದ ಅಡಿಯಲ್ಲಿ ರಾಯಚೂರು ವಿಶ್ವವಿದ್ಯಾಲಯಕ್ಕೆ ಮಂಜೂರಾಗಿರುವ (ಆದೇಶ ಸಂಖ್ಯೆ: ಕಕಪ್ರಅಮಂ/ ಯೋಶಾ/ ಪ್ರಾನಿ/ ವಿಶ್ವವಿದ್ಯಾಲಯ/ 28/ 2024–25/ 11271, ದಿನಾಂಕ: 22.01.2025) ರೂ. 34.30 ಕೋಟಿಗಳ ಈ ಕೆಳಕಾಣಿಸಿದ ನಾಲ್ಕು ವಿವಿಧ ಕಾಮಗಾರಿಗಳಿಗೆ ಮಂಡಳಿಯ ನಿಯಮಾನುಸಾರ ಮತ್ತು ಕೆಟಿಪಿಪಿ ಕಾಯ್ದೆಯ ಅನುಸಾರ ಅನುಷ್ಠಾನಗೊಳಿಸಲು ನಿರ್ಧರಿಸಿ ಆಡಳಿತಾತ್ಮಕ ಮತ್ತು ತಾಂತ್ರಿಕ ಒಪ್ಪಿಗೆಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು. ಮುಂದುವರೆದು, ಸದರಿ ಕಾಮಗಾರಿಗಳ ಕ್ರಮ ಸಂಖ್ಯೆ 01 (Centre of Excellence in Artificial Intelligence at |

| | | |
|---|---|---|
| | | Raichur University) ರ ಕಾಮಗಾರಿಯು ಈಗಾಗಲೇ ಮಂಜೂರಾಗಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡು ಆದೇಶ ನೀಡುವ ಸಂದರ್ಭದಲ್ಲಿ ರದ್ದುಗೊಂಡಿರುವ ಕಾರಣದಿಂದ ಈ ವಿಷಯ ಕುರಿತು ಘನತೆವೆತ್ತ ಕುಲಾಧಿಪತಿಗಳಿಗೆ ದೂರನ್ನು ಸಲ್ಲಿಸಲಾಗಿತ್ತು ಅದರಂತೆ ಈಗ ಘನತೆವೆತ್ತ ಕುಲಾಧಿಪತಿಗಳ ವಿವೇಚನಾ ನಿಧಿಯಿಂದ ಸದರಿ ಯೋಜನೆಯು ಮರು ಮಂಜೂರಾಗಿರುವುದರಿಂದ ಸದರಿ ವಿಷಯದ ಬಗ್ಗೆ ಘನತೆವೆತ್ತ ರಾಜ್ಯಪಾಲರಿಗೆ ಪತ್ರ ಬರೆದು ಅವರ ನಿರ್ದೇಶನದಂತೆ ಕ್ರಮ ವಹಿಸಲು ನಿರ್ಧರಿಸಲಾಯಿತು. |

(Rs in Crores)

| Sl. no. | University work details | Estimate Cost | SCP | TSP | GEN | Total |
|---|---|---|---|---|---|---|
| | **Raichur University** | | | | | |
| 1 | Centre of excellence in artificial intelligence at Raichur University | 9.24 | 2.24 | 1.92 | 5.08 | 9.24 |
| 2 | Purchase and installation of laboratory equipment for PG Students at Raichur University | 8.69 | 2.11 | 1.81 | 4.78 | 8.69 |
| 3 | Creation of sports facility at Raichur University | 6.69 | 1.62 | 1.39 | 3.68 | 6.69 |
| 4 | Establishment of science block (completion of ground floor and first floor) on turnkey basis including civil, class room furniture, laboratory furniture at Raichur University | 9.68 | 2.35 | 2.02 | 5.32 | 9.68 |
| | **Total** | **34.30** | **8.32** | **7.14** | **18.86** | **34.30** |

| | | |
|---|---|---|
| 15 | ರಾಯಚೂರು ವಿಶ್ವವಿದ್ಯಾಲಯದ ಅಂತರ್ ಕಾಲೇಜು ಯುವಜನೋತ್ಸವವನ್ನು ಆಯೋಜಿಸುವ ಕುರಿತು ಚರ್ಚೆ. | ಸದರಿ ಯುವಜನೋತ್ಸವವನ್ನು ಆಯೋಜಿಸುವ ಸಂಬಂಧಿಸಿದಂತೆ, ರೂಪರೇಶಗಳನ್ನು ಸಿದ್ಧಪಡಿಸಲು ಮಾನ್ಯ ಸಿಂಡಿಕೇಟ್ ಸದಸ್ಯರಾದ ಡಾ. ಮೀನಾಕ್ಷಿ ಖಂಡಿಮಠ ಇವರಿಂದ ಸಲಹೆ ಸೂಚನೆಗಳನ್ನು ಪಡೆದು ಒಂದು ಸೂಕ್ತ ದಿನಾಂಕದಂದು ಆಯೋಜಿಸಲು ಒಮ್ಮತದಿಂದ ತಿರ್ಮಾನಿಸಲಾಯಿತು. |
| 16 | ಯಾದಗಿರಿ ಜಿಲ್ಲೆಯಲ್ಲಿ ರಾಯಚೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ ಸ್ಥಾಪಿಸುವ ಕುರಿತು. | ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಈ ವಿಷಯವನ್ನು ಚರ್ಚಿಸಲು ತಿರ್ಮಾನಿಸಲಾಯಿತು. |
| 17 | ರಾಯಚೂರು ವಿಶ್ವವಿದ್ಯಾಲಯದಲ್ಲಿ ಕಾನೂನು ಕೋಶ ಸ್ಥಾಪಿಸುವ ಕುರಿತು ಚರ್ಚೆ. | ಸದರಿ ಕಾನೂನು ಕೋಶ ಸ್ಥಾಪಿಸುವ ಸಂಬಂಧಿಸಿದಂತೆ, ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀ ಶಿವಣ್ಣ ತಂದೆ ಬುಡ್ಡಪ್ಪ ತಪ್ಪಲದೊಡ್ಡಿ ಇವರಿಂದ ಸಲಹೆ ಸೂಚನೆಗಳನ್ನು ಪಡೆಯಲು ಮತ್ತು ಸದರಿ ಕಾನೂನು ಕೋಶ ಸ್ಥಾಪನೆಗೆ ಸರ್ವಾನುಮತದಿಂದ ಒಪ್ಪಿಗೆ ನೀಡಲಾಯಿತು. |
| 18 | ರಾಯಚೂರು ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಗಲ್ಲಿ ಈಗಾಗಲೇ ನೇಮಕಾತಿ ಮಾಡಿಕೊಂಡಿರುವ ಯುಯುಸಿಎಂಎಸ್ ಸಂಯೋಜಕ ಆದೇಶವನ್ನು ಅನುಸಮರ್ಥಿಸುವ ಕುರಿತು. | ಅನುಸಮರ್ಥಿಸಲಾಯಿತು. |



Scanned with OKEN Scanner

| | | |
|---|---|---|
| 19 | ರಾಯಚೂರು ವಿಶ್ವವಿದ್ಯಾಲಯದ ಆವರಣದಲ್ಲಿರುವ ಅತಿಥಿ ಗೃಹ ಕಟ್ಟಡದ ನವೀಕರಣಗೊಳಿಸುವ ಕುರಿತು ಚರ್ಚೆ. | ಈಗಿರುವ ಕಟ್ಟಡದ ಲೋಡ್ ಬೇರಿಂಗ್ ಕೆಪ್ಯಾಸಿಟಿಯನ್ನು ಪರಿಗಣಿಸಿ, ಅತಿಥಿ ಗೃಹದ ನವೀಕರಣದೊಂದಿಗೆ ಮೊದಲ ಮಹಡಿಯಲ್ಲಿ ಹೊಸ ಕೊಠಡಿಗಳನ್ನು ಸರ್ಕಾರದ ಕೆಟಿಪಿಪಿ ಕಾಯ್ದೆಯ ಅನುಸಾರ ನಿರ್ಮಾಣ ಮಾಡುವ ಸಂಬಂಧ ಕ್ರಮ ವಹಿಸಲು ತೀರ್ಮಾನಿಸಲಾಯಿತು. |
| 20 | ರಾಯಚೂರು ವಿಶ್ವವಿದ್ಯಾಲಯಕ್ಕೆ ಒಬ್ಬ ಚಾರ್ಟೆಡ್ ಅಕೌಂಟೆಂಟ್ (Charted Accountant) ಅವರನ್ನು ಎಂಪ್ಯಾನೇಲ್ (Empanel) ಮಾಡುವ ಕುರಿತು ಚರ್ಚೆ. | ಒಬ್ಬ ಸೂಕ್ತ ಚಾರ್ಟೆಡ್ ಅಕೌಂಟೆಂಟ್ (Charted Accountant) ಅನ್ನು ವಿಶ್ವವಿದ್ಯಾಲಯಕ್ಕೆ ಎಂಪ್ಯಾನೆಲ್ (Empanel) ಮಾಡಲು ಮಾನ್ಯ ಕುಲಪತಿಗಳ ವಿವೇಚನೆಗೆ ನೀಡಲು ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು. |
| 21 | ರಾಯಚೂರು ವಿಶ್ವವಿದ್ಯಾಲಯದಲ್ಲಿ 2024–25ನೇ ಸಾಲಿನಲ್ಲಿ ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ಬೇಡಿಕೆಗಳ ಕುರಿತು ಚರ್ಚೆ. | ಮಾನ್ಯ ಸಿಂಡಿಕೇಟ್ ಸದಸ್ಯರುಗಳಾದ ಡಾ. ಮೀನಾಕ್ಷಿ ಖಂಡಿಮಠ, ಅಧ್ಯಕ್ಷರು ಹಾಗೂ ಪ್ರೊ. ಪಾರ್ವತಿ ಸಿ.ಎಸ್ ಮತ್ತು ಶ್ರೀ ಡಿ. ಆರ್. ಚೆನ್ನ, ಸದಸ್ಯರು ಇವರುಗಳನ್ನು ಒಳಗೊಂಡ ಒಂದು ಉಪ–ಸಮಿತಿಯನ್ನು ರಚಿಸಿ ಈ ಕುರಿತಂತೆ ವರದಿಯನ್ನು ಪಡೆದು ಮುಂದಿನ ಕ್ರಮವಹಿಸಲು ನಿರ್ಧರಿಸಲಾಯಿತು. |
| 22 | ರಾಯಚೂರು ವಿಶ್ವವಿದ್ಯಾಲಯದ ಆವರಣದಲ್ಲಿ ಸರ್ಕಾರದ ಅಲ್ಪಸಂಖ್ಯಾತ ಮೆಟ್ರಿಕ್ ನಂತರ ಬಾಲಕಿಯರ ವಸತಿ ನಿಲಯಕ್ಕೆ ಸ್ವಂತ ಕಟ್ಟಡ ನಿರ್ಮಿಸಲು ನಿವೇಶನ ಮಂಜೂರು ಮಾಡುವ ಕುರಿತು ಚರ್ಚೆ. | ಸದರಿ ವಸತಿನಿಲಯಕ್ಕೆ ವಿಶ್ವವಿದ್ಯಾಲಯದ ಆವರಣದಲ್ಲಿ ಅವಶ್ಯಕ ನಿವೇಶನ ಮಂಜೂರು ಮಾಡಲು ಸರ್ವಾನುಮತದಿಂದ ಒಪ್ಪಲಾಯಿತು. |
| 23 | ರಾಯಚೂರು ವಿಶ್ವವಿದ್ಯಾಲಯದಲ್ಲಿ ಆಯೋಜಿಸಲಾಗುವ ಕಬಡ್ಡಿ ಹಾಗೂ ಖೋ–ಖೋ ಕ್ರೀಡೆಗಳಿಗೆ ಸಂಬಂಧಿಸಿದ ಕ್ರೀಡಾ ಸಾಮಾಗ್ರಿಗಳನ್ನು ಖರೀದಿಸುವ ಕುರಿತು ಚರ್ಚೆ. | ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾಗಿರುವ ಕಬಡ್ಡಿ ಹಾಗೂ ಖೋ–ಖೋ ಕ್ರೀಡೆಗಳಿಗೆ ಸಂಬಂಧಿಸಿದ ಕ್ರೀಡಾ ಸಾಮಾಗ್ರಿಗಳನ್ನು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ಸರ್ಕಾರದ ನಿಯಮಾನುಸಾರ ಖರೀದಿಸಲು ಅನುಮೋದಿಸಲಾಯಿತು. |
| 24 | ರಾಯಚೂರು ವಿಶ್ವವಿದ್ಯಾಲಯ ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದಲ್ಲಿ ಖಾಯಂ ಬೋಧಕ ಸಿಬ್ಬಂದಿಗಳು ಇಲ್ಲದೆ ಇರುವ ಪ್ರಯುಕ್ತ ವಿಭಾಗದ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ ವಿಷಯದಲ್ಲಿ ಪಿಎಚ್.ಡಿ ಪದವಿಗೆ ಮಾರ್ಗದರ್ಶಕರನ್ನಾಗಿ ಹಾಗೂ ವಿಭಾಗದ ಶೈಕ್ಷಣಿಕ ಚಟುವಟಿಕೆಗಳು ಸುಗಮವಾಗಿ ನೋಡಿಕೊಳ್ಳುವ ಹಿತದೃಷ್ಟಿಯಿಂದ ಡಾ. ಜಿ.ಎಸ್. ಬಿರಾದಾರ ಗ್ರಂಥಪಾಲಕರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು ಇವರನ್ನು ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ ವಿಭಾಗದ ಮುಖ್ಯಸ್ಥರನ್ನಾಗಿ ನೇಮಕ ಮಾಡುವ ಕುರಿತು ಚರ್ಚೆ. | ಡಾ. ಜಿ. ಎಸ್. ಬಿರಾದಾರ, ಗ್ರಂಥಪಾಲಕರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು ಇವರ ಮನವಿಯಂತೆ ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ಬೋಧನಾ ಕಾರ್ಯದ ಜೊತೆಗೆ ಸದರಿ ವಿಭಾಗದ ಮುಖ್ಯಸ್ಥರನ್ನಾಗಿ ನೇಮಕ ಮಾಡಿಕೊಳ್ಳಲು ಸರ್ವಾನುಮತದಿಂದ ಅನುಮೋದಿಸಲಾಯಿತು. |
| 25 | 2025–26ನೇ ಶೈಕ್ಷಣಿಕ ಸಾಲಿನಲ್ಲಿ ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ಹೊಸ UG/PG/ಕೋರ್ಸ್/ ಹೊಸ ವಿಷಯ/ ಪ್ರವೇಶಮಿತಿ ಹೆಚ್ಚಳ (PG/BCA/BBA/BSW) ಕಾಲೇಜು ಹೆಸರು ಬದಲಾವಣೆ/ ಕಾಲೇಜು ಆಡಳಿತ ಮಂಡಳಿ ಬದಲಾವಣೆ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಕುರಿತು | ರಾಯಚೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿನ ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳ 2025–26ನೇ ಸಾಲಿಗೆ ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯಗಳಲ್ಲಿ ಹೊಸ ವಿಷಯ/ ಹೊಸ ಕೋರ್ಸ್/ ಸ್ನಾತಕೋತ್ತರ / ಬಿಸಿಎ ಮತ್ತು ಬಿಬಿಎ ಕೋರ್ಸಗಳಿಗೆ ಹೆಚ್ಚುವರಿ ಪ್ರವೇಶಮಿತಿ/ ಮಹಾವಿದ್ಯಾಲಯದ ಹೆಸರು ಬದಲಾವಣೆ ಕುರಿತಂತೆ |



Scanned with OKEN Scanner

| | | |
|---|---|---|
| | | ಏಳು ಮಹಾವಿದ್ಯಾಲಯಗಳ ಸ್ಥಳೀಯ ತನಿಖಾ ಸಮಿತಿಗಳ ಶಿಫಾರಸ್ಸು ವರದಿಗಳನ್ನು ಸಲ್ಲಿಸಿದ್ದು, ಸಭೆಯು ಸದರಿ ಸ್ಥಳೀಯ ತನಿಖಾ ವರದಿಗಳಿಗೆ ವಗದಿನಾಂಕ: 27.01.2025 ರಂದು ವಿವರವಾಗಿ ಚರ್ಚಿಸಿ ಕರ್ನಾಟಕ ಸರ್ಕಾರದ ನಿಯಮಾವಳಿಗಳ ಪ್ರಕಾರ ಸರ್ಕಾರಕ್ಕೆ ಮುಂದಿನ ಕ್ರಮಕ್ಕಾಗಿ ಪ್ರಸ್ತಾವನೆಗಳನ್ನು ಸಲ್ಲಿಸಲು ಸರ್ವಾನುಮತದಿಂದ ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು ಮತ್ತು ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಬೇಕೆಂದು ಸಭೆಯು ಸೂಚಿಸಿತು. |
| 26 | **ಅಧ್ಯಕ್ಷರ ಅನುಮತಿಯ ಮೇರೆಗೆ ಇತರ ವಿಷಯಗಳ ಚರ್ಚೆ**<br><br>1. ಆಕಾಂಕ್ಷಿತ ಡಿಎಂಎಲ್‌ಟಿ ಮತ್ತು ಪ್ಯಾರಾ ಮೆಡಿಕಲ್ ವಿದ್ಯಾರ್ಥಿಗಳಿಗೆ ರಾಯಚೂರು ವಿಶ್ವವಿದ್ಯಾಲಯದ ಸೂಕ್ಷ್ಮಜೀವಶಾಸ್ತ್ರ ಮತ್ತು ರಸಾಯನಶಾಸ್ತ್ರ ವಿಭಾಗಗಳಲ್ಲಿ ತರಬೇತಿ ನೀಡುವ ಕುರಿತು ಚರ್ಚೆ.<br><br>2. ಕಲ್ಯಾಣ ಕರ್ನಾಟಕ ಮಾನವ ಜಿನೋಮ್ ಅಧ್ಯಯನ ಸಂಸ್ಥೆಯು ಸಂಶೋದನೆ ಹಾಗೂ ಸೇವೆಗಳಿಗೆ ಸಂಬಂಧಿಸಿದಂತೆ, ಕಲ್ಯಾಣ ಕರ್ನಾಟಕ ಭಾಗದ ವೈದ್ಯಕೀಯ ಮಹಾವಿದ್ಯಾಲಯಗಳೊಂದಿಗೆ ಮತ್ತು ಪೋಲೀಸ್ ಇಲಾಖೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಕುರಿತು.<br><br>3. ಪ್ರಸ್ತುತ ಶೈಕ್ಷಣಿಕ ವಿಭಾಗ ಕಟ್ಟಡದಲ್ಲಿರುವ ಶೌಚಾಲಯಗಳನ್ನು (ಪುರುಷ & ಮಹಿಳಾ) ನವೀಕರಿಸಲು ಮತ್ತು ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಸಂಖ್ಯೆಗಳಿಗನುಗುಣವಾಗಿ ಹೆಚ್ಚಿಸುವ ಕುರಿತು ಚರ್ಚೆ | 1. ಸೂಕ್ತ ಶುಲ್ಕವನ್ನು ನಿಗದಿಗೊಳಿಸಿ ತರಬೇತಿ ನೀಡಲು ಅಂಗೀಕರಿಸಲಾಯಿತು<br><br>2. ಒಪ್ಪಲಾಯಿತು.<br><br>3. ಪ್ರಸ್ತುತ ಶೈಕ್ಷಣಿಕ ವಿಭಾಗ ಕಟ್ಟಡದಲ್ಲಿರುವ ಶೌಚಾಲಯಗಳನ್ನು (ಪುರುಷ & ಮಹಿಳಾ) ನವೀಕರಿಸಲು ಮತ್ತು ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಸಂಖ್ಯೆಗಳಿಗನುಗುಣವಾಗಿ ಹೆಚ್ಚಿಸುವುದನ್ನು ಒಪ್ಪಲಾಯಿತು. |

25/2/25

ಕುಲಸಚಿವರು

ಕುಲಪತಿಗಳು



Scanned with OKEN Scanner